ಇ) ಕೆಲ ಸಂಪನ್ಮೂಲ ಕ್ರೋಢೀಕರಣ ಯೋಜನೆಯಡಿ ಬೆಳಗಾಂ ಜಿಲ್ಲೆಯಲ್ಲಿ ರೂ. 4,717.80 ಲಕ್ಷ ವೆಚ್ಚದಲ್ಲಿ 5.979 ಅಂತರ್ಜಲ ಕೃತಕ ಮರುಪೂರೈಕೆ ರಚನೆಗಳನ್ನು ನಿರ್ಮಾಣ ಮಾಡಲು ವಿಶೇಷವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ) ಜಲ ಸಂಪನ್ಮೂಲ ಕ್ರೋಢೀಕರಣ ಯೋಜನೆಯಡಿ ಸದರಿ ತಾಲ್ಲೂಕುಗಳಲ್ಲಿ ಅಂತರ್ಜಲವನ್ನು ಹೆಚ್ಚಿಸುವ ಸಲುವಾಗಿಯೂ ಸಹ ವಿಶೇಷ ಕಾರ್ಯಕ್ರಮಗಳನ್ನು 1995-96ನೇ ಸಾಲಿನಿಂದೀಚೆಗೆ ಚಿಕ್ಕೋಡಿ, ಬೈಲಹೊಂಗಲ, ಹುಕ್ಕೇರಿ ಮತ್ತು ರಾಯಬಾಗ ತಾಲ್ಲೂಕುಗಳಲ್ಲಿ ಬೇರೆ ಬೇರೆ ಯೋಜನೆಗಳಡಿಯಲ್ಲಿ ಒಟ್ಟು 12 ತಡೆಗೋಡೆ ಮತ್ತು 40 ಇಂಗು ಬಾವಿಗಳನ್ನು ನಿರ್ಮಾಣ ಮಾಡಲಾಗಿದೆ.

ನಗರಸಭೆ, ಪುರಸಭೆಗಳ ಸದಸ್ಯರ ಚುನಾವಣೆ ಮೀಸಲಾತಿ

815 (1060) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಗರಸಭೆ-ಪುರಸಭೆಗಳಿಗೆ ನಡೆಯುವ ಸದಸ್ಯರ ಚುನಾವಣೆ ಮೀಸಲಾತಿ ನಿರ್ಧಾರ ಅವೈಜ್ಞಾನಿಕವಾಗಿದ್ದು ಹೊಸ ನೀತಿ ರೂಪಿಸುವಾಗ ಅನುಸರಿಸುವ ಕ್ರಮ ಏನು? ಈ ಮೀಸಲಾತಿಯನ್ನು ರೂಪಿಸುವ ಅಧಿಕಾರಿಗಳು ಯಾರು ಒಮ್ಮೆ ಪ್ರಕರವಾದ ನಂತರ ಮತ್ತೊಮ್ಮೆ ಬದಲಾಯಿಸುವ ಪದ್ಧತಿ ಇರುವುದೇ?

ಆ) ಈ ನೀತಿಯನ್ನು ರೂಪಿಸುವಾಗಲೇ ಅಧ್ಯಕ್ಷ, ಉಪಾಧ್ಯಕ್ಷರ ಮೀಸಲಾತಿಯನ್ನು ಪ್ರಕಟಿಸಲಾಗುವುದೇ? ಇಲ್ಲವಾದಲ್ಲಿ ಕಾರಣಗಳೇನು?

ಶ್ರೀ ಮಲ್ಲಿಕಾರ್ಜುನನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು)

ಅ) ಸರ್ಕಾರವು ಮೀಸಲಾತಿಯನ್ನು ನಿಗಧಿಪಡಿಸುವ ಬಗ್ಗೆ ಸೂಕ್ತ ಮಾರ್ಗಸೂಚಿಯನ್ನು ಕರ್ನಾಟಕ ಪುರಸಭೆ ಕಾಯಿದೆ 1964ರ ನಿಯಮ 11ರ ಉಪನಿಯಮ (2) (3) ಮತ್ತು (4) ಹಾಗೂ ಕರ್ನಾಟಕ ಮಹಾನಗರಪಾಲಿಕೆ ಕಾಯಿದೆ 1976ರ ನಿಯಮ 73 ರ ಉಪನಿಯಮ (2) (3) ಮತ್ತು (4) ರನ್ವಯ ರೂಪಿಸಿದೆ. ಸಚಿವ ಸಂಪುಟ ಉಪಸಮಿತಿಯು ಈ ಮಾರ್ಗಸೂಚಿಗಳನ್ನು ಅಂತಿಮಗೊಳಿಸಿದೆ. ಅದರಂತೆ ಸರ್ಕಾರವು, ವಾರ್ಡುವಾರು ಮೀಸಲಾತಿಯನ್ನು ನಿಗಧಿಪಡಿಸಿ ಹೊರಡಿಸುವ ಅಧಿಸೂಚನೆ ಅಂತಿಮವಾಗಿರುವುದು.

ಆ) ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಮೀಸಲಾತಿ ಸ್ಥಾನಗಳ ನಿಗಧಿ ಬಗ್ಗೆ ಅಧಿಸೂಚನೆಯನ್ನು ವಾರ್ಡುವಾರು ಮೀಸಲಾತಿ ಸ್ಥಾನಗಳ ನಿಗಧಿ ಬಗೆಗಿನ ಅಧಿಸೂಚನೆಯೊಂದಿಗೇ ಪ್ರಕಟಿಸುವುದಿಲ್ಲ. ಅಧ್ಯಕ್ಷ, ಉಪಾಧ್ಯಕ್ಷರ ಮೀಸಲಾತಿ ಸ್ಥಾನಗಳ ನಿಗದಿ ಬಗೆಗೆ ಪ್ರತ್ಯೇಕ ನಿಯಮಗಳಿವೆ.